ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ:21:2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:17.06.2020

ಇವರಿಗೆ,
ಸಂಬಂದಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ
ಪ್ರಾಂಶುಪಾಲರುಗಳಿಗೆ

ವಿಷಯ: 2016ರ ಪರಿಷ್ಕೃತ ಯುಜಿಸಿ ವೇತನ ಬಾಕಿ ಪಾವತಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಕುರಿತು

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ: ಆಯವ್ಯಯ: 16ಯುಬಾ: 84:2019-20 ದಿನಾಂಕ:07.05.2020 ಮತ್ತು 16.05.2020

****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2016ರ ಪರಿಷ್ಕೃತ ಯುಜಿಸಿ ವೇತನ ಬಾಕಿಯನ್ನು ಪಾವತಿಸುವ ಸಂಬಂಧ ಉಲ್ಲೇಖಿತ ಸುತ್ತೋಲೆಗಳಲ್ಲಿ ಕಾಲೇಜುಗಳ ಹಂತದಲ್ಲಿ ತೆಗೆದುಕೊಳ್ಳಬೇಕಾದ ಕ್ರಮ ಕುರಿತಂತೆ ನಿರ್ದೇಶನವನ್ನು ನೀಡಿ ಅವಶ್ಯವಿರುವ ಅನುದಾನದ ಮಾಹಿತಿಯನ್ನು ಎಲ್ಲಾ ಕಾಲೇಜುಗಳಿಂದ ಪಡೆದು ಬಾಕಿ ಪಾವತಿಗೆ ಈ ಕಛೇರಿಯ ಹಂತದಲ್ಲಿ ಕ್ರಮವಹಿಸಲಾಗಿರುತ್ತದೆ ಹಾಗೂ ಬಾಕಿ ಮೊತ್ತವು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳ ಬ್ಯಾಂಕ್ ಖಾತೆಗೆ ಜಮೆಯಾಗಿರುತ್ತದೆ.

ತದನಂತರದಲ್ಲಿ ಹಲವಾರು ಕಾಲೇಜುಗಳಿಂದ ಬಾಕಿ ಪಾವತಿಗೆ ಸಂಬಂಧಿಸಿದಂತೆ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಗಳನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಪತ್ರದೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿನ ಕಾಲೇಜುಗಳು ಪಾವತಿಸಬೇಕಾದ 2016ರ ಪರಿಷ್ಕೃತ ಯುಜಿಸಿ ವೇತನ ಬಾಕಿಯ ವಿವರಗಳನ್ನು ಗೂಗಲ್ ಫಾರಂ ನಲ್ಲಿ ಅಪ್‌ಲೋಡ್ ಮಾಡಿರುವ ಮಾಹಿತಿಗೂ ಹಾರ್ಡ್ ಪ್ರತಿಯಲ್ಲಿ ಕೋರಿರುವ ಮಾಹಿತಿಗೂ ಸಾಮ್ಯತೆ ಇಲ್ಲದಿರುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ಬಾಕಿ ಪಾವತಿಯಲ್ಲಿ ವ್ಯತ್ಯಯವಾಗಿರುತ್ತದೆ. ಆದರೆ ತಮ್ಮ ಹಂತದಲ್ಲಿ ಆಗಿರುವ ತಪ್ಪನ್ನು ಮರೆಮಾಚಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಮನವಿಗಳನ್ನು ಸಲ್ಲಿಸುತ್ತಿರುವುದು ಸರಿಯಾದ ಕ್ರಮವಲ್ಲ. ತಮ್ಮ ಹಂತದಲ್ಲಿ ಆಗಿರುವ ತಪ್ಪಿಗೆ ಸಂಬಂಧಿಸಿದಂತೆ ತಪ್ಪೊಪ್ಪಿಗೆ ಕುರಿತಂತೆ ಸ್ಪಷ್ಟ ವಿವರಣೆಯೊಂದಿಗೆ ಮಾಹಿತಿಯನ್ನು ದಿನಾಂಕ:18.06.2020ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಅಂತಿಮವಾಗಿ ಈಗಾಗಲೇ ಯುಜಿಸಿ ಬಾಕಿ ಸ್ವೀಕೃತವಾಗಿರುವ ಮೊತ್ತದಲ್ಲಿ ಕಡಿಮೆಯಾಗಿರುವ ಪ್ರಕರಣಗಳಲ್ಲಿ ಮೇಲಿನ ಕಂಡಿಕೆಯಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಪ್ರಾಂಶುಪಾಲರುಗಳು ಸ್ಪಷ್ಟ ವಿವರಣೆಯೊಂದಿಗೆ ದಿನಾಂಕ:18.06.202ರೊಳಗೆ ಅಗತ್ಯ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ತಡವಾಗಿ ಸ್ವೀಕೃತವಾಗುವ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ಪ್ರಾಂಶುಪಾಲರ ಗಮನಕ್ಕೆ ತರಲಾಗಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

**ಅಡಕ:** ಮೇಲ್ಕಂಡಂತೆ

2016ರ ಯುಜಿಸಿ ಬಾಕಿ ಪಾವತಿಗೆ ಹೆಚ್ಚುವರಿ ಅನುದಾನ ಕೋರಿವ ಪ್ರಕರಣದಲ್ಲಿ ಸ್ಪಷ್ಟ ವಿವರಣೆ ನೀಡದಿರುವ ಕಾಲೇಜುಗಳ ವಿವರ

| ಕ್ರ.ಸಂ | ಕಾಲೇಜಿನ ಹೆಸರು | ಹೆಚ್ಚುವರಿಯಾಗಿ ಕೋರಿರುವ ಮೊತ್ತ |
|---|---|---|
| 1 | ಸ.ಪ್ರ.ದ.ಕಾಲೇಜು, ಚನ್ನಪಟ್ಟಣ | 1172062 |
| 2 | ಸ.ಪ್ರ.ದ. ಕಾಲೇಜು, ಕೊರಟಗೆರೆ | 369682 |
| 3 | ಸ.ಪ್ರ.ದ.ಕಾಲೇಜು, ಬಾಗೇಪಲ್ಲಿ | 377386 |
| 4 | ಸ.ಪ್ರ.ದ.ಕಾಲೇಜು, ಬಂಗಾರಪೇಟೆ | 12900 |
| 5 | ಸ.ಪ್ರ.ದ. ಕಾಲೇಜು, ಕಾವೂರು | 281924 |
| 6 | ಸ.ಪ್ರ.ದ. ಕಾಲೇಜು, ಕೋಟ ಪಡುಕೆರೆ | ಮೊತ್ತ ನಮೂದಿಸಿಲ್ಲ |
| 7 | ಸ.ಪ್ರ.ದ.ಕಾಲೇಜು, ಹಾನಗಲ್ | 395906 |
| 8 | ಸ.ಪ್ರ.ದ. ಕಾಲೇಜು, ಯಾದಗಿರಿ | 1722848 |
| 9 | ಸ.ಪ್ರ.ದ.ಕಾಲೇಜು, ಸುರಪುರ | 317951 |
| 10 | ಸ.ಪ್ರ.ದ.ಕಾಲೇಜು, ಬೀದರ್ | 489333 |
| 11 | ಸ.ಪ್ರ.ದ. ಕಾಲೇಜು, ನಾಗಮಂಗಲ | 870037 |
| 12 | ಸ.ಪ್ರ.ದ. ಮಹಿಳಾ ಕಾಲೇಜು, ಹಾಸನ | 1653835 |
| 13 | ಸ.ಪ್ರ.ದ. ಕಾಲೇಜು, ಶಿವಮೊಗ್ಗ | 167779 |
| 14 | ಸ.ಪ್ರ.ದ. ಕಾಲೇಜು, ಚನ್ನಗಿರಿ | 395264 |
| 15 | ಸ.ಪ್ರ.ದ. ಕಾಲೇಜು, ದಾವಣಗೆರೆ | 763839 |
| 16 | ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | 131502 |

8/6/2018

ಕಾಲೇಜು ಶಿಕ್ಷಣ ನಿರ್ದೇಶಕರು